ರೂಲಿಂಗ್ ಹಾಗೂ ಕಂಟ್ರೋಲಿಂಗ್ ಪವರನಿಂದ ಸ್ವರಾಜ್ಯದ ಪ್ರಾಪ್ತಿ

ಇಂದು ಮಕ್ಕಳ ಸ್ನೇಹಿ ಬಾಪ್ದಾದಾ ಪ್ರತಿಯೊಬ್ಬ ಮಗುವನ್ನು ವಿಶೇಷ ಎರಡು ಮಾತುಗಳಲ್ಲಿ ಪರಿಶೀಲನೆ ಮಾಡುತ್ತಿದ್ದರು. ಸ್ನೇಹದ ಪ್ರತ್ಯಕ್ಷ ಸ್ವರೂಪವಾಗಿ ಮಕ್ಕಳನ್ನು ಸಂಪನ್ನ ಹಾಗೂ ಸಂಪೂರ್ಣರನ್ನಾಗಿ ಮಾಡಬೇಕಾಗಿದೆ. ಪ್ರತಿಯೊಬ್ಬರಲ್ಲಿ ರೂಲಿಂಗ್ ಫವರ್ ಮತ್ತು ಕಂಟ್ರೋಲಿಂಗ್ ಫವರ್ ಎಲ್ಲಿಯ ತನಕ ಬಂದಿದೆ ಎಂಬುದನ್ನು ನೋಡುತ್ತಿದ್ದೆವು. ಹೇಗೆ ಶರೀರದ ಸ್ಥೂಲ ಕರ್ಮೇಂದ್ರಿಯಗಳು ಆತ್ಮದ ಹತೋಟಿಯಿಂದ ನಡೆಯುತ್ತಲೇ ಯಾವಾಗ ಬೇಕೋ, ಹೇಗೆ ಬೇಕೋ ಮತ್ತು ಎಲ್ಲಿ ಬೇಕೋ ಹಾಗೆಯೇ ನಡೆಸಬಲ್ಲಿರಿ ಮತ್ತು ನಡೆಸುತ್ತಾ ಇರುತ್ತೀರಿ. ನಿಯಂತ್ರಣಾ ಶಕ್ತಿಯೂ ಇದೆ, ಹೇಗೆ ಕೈ-ಕಾಲು ಸ್ಥೂಲ ಶಕ್ತಿಗಳಿವೆಯೋ ಹಾಗೆಯೇ ಮನಸ್ಸು-ಬುದ್ಧಿ-ಸಂಸ್ಕಾರವು ಆತ್ಮದ ಸೂಕ್ಷ್ಮ ಶಕ್ತಿಗಳಾಗಿವೆ. ಸೂಕ್ಷ್ಮ ಶಕ್ತಿಗಳ ಮೇಲೆ ನಿಯಂತ್ರಣ ಮಾಡುವ ಶಕ್ತಿ ಅರ್ಥಾತ್ ಮನಸ್ಸು-ಬುದ್ಧಿಯನ್ನು, ಸಂಸ್ಕಾರಗಳನ್ನು ಹೇಗೆ ಬೇಕೋ, ಎಲ್ಲಿ ಬೇಕೋ, ಯಾವಾಗ ಬೇಕೋ, ಎಷ್ಟು ಸಮಯ ಬೇಕೋ ಅದೇರೀತಿ ಕಂಟ್ರೋಲಿಂಗ್ ಫವರ್, ರೂಲಿಂಗ್ ಫವರ್ ಬಂದಿದೆಯೇ? ಏಕೆಂದರೆ ಈ ಬ್ರಾಹ್ಮಣ ಜೀವನದಲ್ಲಿ ಮಾ|| ಸರ್ವಶಕ್ತಿವಂತರಾಗುತ್ತೀರಿ. ಈ ಸಮಯದ ಪ್ರಾಪ್ತಿಯು ಇಡೀ ಕಲ್ಪ ರಾಜ್ಯ ರೂಪ ಮತ್ತು ಪೂಜಾರಿಯ ರೂಪದಲ್ಲಿ ನಡೆಯುತ್ತಾ ಇರುತ್ತದೆ. ಅರ್ಧಕಲ್ಪ ವಿಶ್ವದ ರಾಜ್ಯಭಾರವನ್ನು ಎಷ್ಟು ಪ್ರಾಪ್ತಿ ಮಾಡಿಕೊಳ್ಳುತ್ತೀರೋ ಅದರನುಸಾರವೇ ಎಷ್ಟು ಶಕ್ತಿಶಾಲಿ ರಾಜ್ಯ ಪದವಿ ಹಾಗೂ ಪೂಜ್ಯ ಪದವಿ ಸಿಗುತ್ತದೆಯೋ ಅಷ್ಟೇ ಭಕ್ತಿಮಾರ್ಗದಲ್ಲಿಯೂ ಶ್ರೇಷ್ಠ ಪೂಜಾರಿಗಳಾಗುತ್ತೀರಿ. ಭಕ್ತಿಯಲ್ಲಿಯೂ ಶ್ರೇಷ್ಠ ಆತ್ಮನಿಗೆ ತನ್ನ ಮನಸ್ಸು-ಬುದ್ಧಿ-ಸಂಸ್ಕಾರಗಳ ಮೇಲೆ ನಿಯಂತ್ರಣಾ ಶಕ್ತಿಯಿರುತ್ತದೆ. ಭಕ್ತರಲ್ಲಿಯೂ ನಂಬರ್ವಾರ್ ಶಕ್ತಿಶಾಲಿ ಭಕ್ತರಾಗುತ್ತಾರೆ ಅರ್ಥಾತ್ ಯಾವ ಇಷ್ಟ ದೇವನ ಭಕ್ತಿ ಮಾಡುವರೋ, ಎಷ್ಟು ಸಮಯ ಯಾವ ವಿಧಿಯಿಂದ ಮಾಡಬಯಸುವರೋ ಅದರಂತೆಯೇ ಭಕ್ತಿಯ ಫಲ, ಭಕ್ತಿಯ ವಿಧಿಯ ಪ್ರಮಾಣ ಸಂತುಷ್ಟತೆ, ಏಕಾಗ್ರತೆ, ಖುಷಿ ಮತ್ತು ಶಕ್ತಿಯನ್ನು ಪ್ರಾಪ್ತಿ ಮಾಡಿಕೊಳ್ಳುತ್ತಾರೆ ಆದರೆ ರಾಜ್ಯ ಪದವಿ ಮತ್ತು ಭಕ್ತಿಯ ಶಕ್ತಿಯ ಪ್ರಾಪ್ತಿಯ ಆಧಾರವು ಈ ಬ್ರಾಹ್ಮಣ ಜನ್ಮವಾಗಿದೆ. ಅಂದಾಗ ಈ ಸಂಗಮಯುಗದ ಅತಿ ಚಿಕ್ಕ ಒಂದು ಜನ್ಮವು ಇಡೀ ಕಲ್ಪದ ಸರ್ವ ಜನ್ಮಗಳಿಗೂ ಆಧಾರವಾಗಿದೆ! ಹೇಗೆ ರಾಜ್ಯಭಾರ ಮಾಡುವುದರಲ್ಲಿ ವಿಶೇಷ ಆಗುತ್ತೀರೋ ಹಾಗೆಯೇ ಭಕ್ತರಲ್ಲಿಯೂ ವಿಶೇಷ ಆಗುತ್ತೀರಿ ಸಾಧಾರಣರಲ್ಲ. ಭಕ್ತಮಾಲೆಯ ಭಕ್ತರು ಬೇರೆ ಇದ್ದಾರೆ, ಆದರೆ ತಾವು ತಾವೇ ಪೂಜ್ಯ ತಾವೇ ಪೂಜಾರಿ ಆತ್ಮರ ಭಕ್ತಿಯೂ ಸಹ ವಿಶೇಷವಾಗಿದೆ. ಆದ್ದರಿಂದ ಇಂದು ಬಾಪ್ದಾದಾ ಮಕ್ಕಳ ಮೂಲಾಧಾರ ಜನ್ಮವನ್ನು ನೋಡುತ್ತಿದ್ದೆವು. ಬ್ರಾಹ್ಮಣ ಜೀವನದಲ್ಲಿ ಆದಿಯಿಂದ ಇಲ್ಲಿಯವರೆಗೆ ರೂಲಿಂಗ್ ಫವರ್, ಕಂಟ್ರೋಲಿಂಗ್ ಫವರ್ ಸದಾ ಮತ್ತು ಎಷ್ಟು ಪರ್ಸೆಂಟೇಜ್ನಲ್ಲಿ ಉಳಿದುಕೊಂಡಿದೆ. ಇದರಲ್ಲಿಯೂ ಮೊದಲು ತಮ್ಮದೇ ಸೂಕ್ಷ್ಮ ಶಕ್ತಿಗಳ ಫಲಿತಾಂಶವನ್ನು ಪರಿಶೀಲಿಸಿಕೊಳ್ಳಿ. ಫಲಿತಾಂಶದಲ್ಲಿ ಏನು ಕಾಣುತ್ತದೆ? ಈ ವಿಶೇಷ ಮೂರು ಶಕ್ತಿಗಳಾದ- ''ಮನಸ್ಸು-ಬುದ್ಧಿ-ಸಂಸ್ಕಾರ" ದ ಮೇಲೆ ಹತೋಟಿಯಿರಲಿ. ಇದಕ್ಕೇ ಸ್ವರಾಜ್ಯಾಧಿಕಾರಿಗಳೆಂದು ಹೇಳಲಾಗುತ್ತದೆ. ಆಗ ಈ ಸೂಕ್ಷ್ಮ ಶಕ್ತಿಗಳೇ ಸ್ಥೂಲ ಕರ್ಮೇಂದ್ರಿಯಗಳನ್ನು ನಿಯಮ ಮತ್ತು ಸಂಯಮದಲ್ಲಿ ನಡೆಸುತ್ತವೆ. ಫಲಿತಾಂಶದಲ್ಲಿ ಏನು ನೋಡಿದೆವು? ಯಾವಾಗ, ಎಲ್ಲಿ, ಹೇಗೆ- ಈ ಮೂರು ಮಾತುಗಳಲ್ಲಿ ಇನ್ನೂ ಯಥಾ ಶಕ್ತಿಯಿದೆ. ಸರ್ವಶಕ್ತಿಯಲ್ಲ ಆದರೆ ಯಥಾಶಕ್ತಿ, ಯಾವುದಕ್ಕೆ ಡಬಲ್ ವಿದೇಶಿಯರು ತಮ್ಮ ಭಾಷೆಯಲ್ಲಿ `ಸಮ್ ತಿಂಗ್' ಶಬ್ದವನ್ನು ಉಪಯೋಗಿಸುತ್ತೀರಿ ಅಂದಮೇಲೆ ಅಂತಹವರಿಗೆ ಸರ್ವಶಕ್ತಿವಂತರೆಂದು ಹೇಳಲಾಗುತ್ತದೆಯೇ? ಶಕ್ತಿಗಳಂತೂ ಇದೆ ಆದರೆ ಎಲ್ಲಾ ಶಕ್ತಿಗಳೂ ಇವೆಯೇ? ವಾಸ್ತವದಲ್ಲಿ ಇದಕ್ಕೇ ಬ್ರಾಹ್ಮಣ ಜೀವನದ ತಳಪಾಯವೆಂದು ಹೇಳಲಾಗುತ್ತದೆ. ಯಾರಿಗೆ ಸ್ವಯಂನ ಮೇಲೆ ಎಷ್ಟು ರಾಜ್ಯವಿರುವುದೋ ಅರ್ಥಾತ್ ಸ್ವಯಂ ನಡೆಯುವ ಮತ್ತು ಸರ್ವರನ್ನೂ ನಡೆಸುವ ವಿಧಿಯು ಬರುತ್ತದೆಯೋ ಅವರೇ ಮೊದಲಿನ ನಂಬರನ್ನು ಪಡೆಯುತ್ತಾರೆ. ಈ ತಳಪಾಯದಲ್ಲಿ ಒಂದುವೇಳೆ ಯಥಾಶಕ್ತಿಯಿದೆಯೆಂದರೆ ತಾನಾಗಿಯೇ ನಂಬರ್ ಹಿಂದೆ ಆಗಿ ಬಿಡುತ್ತದೆ. ಯಾರಿಗೆ ಸ್ವಯಂನ್ನು ನಡೆಸುವ ಮತ್ತು ನಡೆಯುವುದು ಬರುತ್ತದೆಯೋ ಅವರು ಅನ್ಯರನ್ನೂ ಸಹಜವಾಗಿ ನಡೆಸಬಲ್ಲರು ಅರ್ಥಾತ್ ಹ್ಯಾಂಡ್ಲಿಂಗ್ ಫವರ್ ಬಂದು ಬಿಡುತ್ತದೆ. ಕೇವಲ ಅನ್ಯರನ್ನೂ ಹ್ಯಾಂಡಲ್ ಮಾಡುವುದಕ್ಕಾಗಿ ಹ್ಯಾಂಡ್ಲಿಂಗ್ ಫವರ್ (ನಡೆಸುವ ಶಕ್ತಿ) ಬೇಕು ಎಂದಲ್ಲ. ಯಾರು ತಮ್ಮ ಸೂಕ್ಷ್ಮ ಶಕ್ತಿಗಳನ್ನೂ ಹ್ಯಾಂಡಲ್ ಮಾಡುವರೋ ಅವರು ಅನ್ಯರನ್ನೂ ಹ್ಯಾಂಡಲ್ ಮಾಡಬಲ್ಲರು. ಆಗ ಸ್ವಯಂನ ಮೇಲೆ ಕಂಟ್ರೋಲಿಂಗ್ ಫವರ್, ರೂಲಿಂಗ್ ಫವರ್ ಸರ್ವರಿಗಾಗಿ ಯಥಾರ್ಥ ಹ್ಯಾಂಡ್ಲಿಂಗ್ ಫವರ್ ಆಗಿ ಬಿಡುತ್ತದೆ. ಅಜ್ಞಾನಿ ಆತ್ಮಗಳನ್ನೂ ಸೇವೆಯ ಮೂಲಕವಾದರೂ ಹ್ಯಾಂಡಲ್ ಮಾಡಿ ಅಥವಾ ಬ್ರಾಹ್ಮಣ ಪರಿವಾರದಲ್ಲಿ ಸ್ನೇಹ ಸಂಪನ್ನ, ಸಂತುಷ್ಟತಾ ಸಂಪನ್ನ ವ್ಯವಹಾರವನ್ನಾದರೂ ಮಾಡಿ, ಎರಡರಲ್ಲಿಯೂ ಸಫಲರಾಗಿ ಬಿಡುತ್ತೀರಿ ಏಕೆಂದರೆ ಕೆಲವರು ಇಂತಹ ಮಕ್ಕಳಿದ್ದಾರೆ, ಅವರು ತಂದೆಯನ್ನು ಅರಿತುಕೊಳ್ಳುವುದು, ತಂದೆಯ ಮಕ್ಕಳಾಗುವುದು ಮತ್ತು ತಂದೆಯೊಂದಿಗೆ ಪ್ರೀತಿಯ ರೀತಿಯನ್ನು ನಿಭಾಯಿಸುವುದನ್ನು ಬಹಳ ಸಹಜ ಅನುಭವ ಮಾಡುತ್ತಾರೆ ಆದರೆ ಎಲ್ಲಾ ಬ್ರಾಹ್ಮಣ ಆತ್ಮರೊಂದಿಗೆ ನಡೆಯುವುದರಲ್ಲಿ ಸಮ್ ತಿಂಗ್ ಹೇಳುತ್ತಾರೆ. ಇದಕ್ಕೆ ಕಾರಣವೇನು? ತಂದೆಯೊಂದಿಗೆ ನಿಭಾಯಿಸುವುದು ಏಕೆ ಸಹಜವೆನಿಸುತ್ತದೆ? ಏಕೆಂದರೆ ಹೃದಯದ ಪ್ರೀತಿಯು ಅಟೂಟವಾಗಿದೆ. ಪ್ರೀತಿಯಲ್ಲಿ ನಿಭಾಯಿಸುವುದು ಸಹಜವಾಗುತ್ತದೆ, ಯಾರೊಂದಿಗೇ ಪ್ರೀತಿಯಿರುವುದೋ ಅವರಿಂದ ಏನಾದರೂ ಶಿಕ್ಷಣದ ಸೂಚನೆ ಸಿಗುವುದೂ ಸಹ ಪ್ರಿಯವೆನಿಸುತ್ತದೆ ಮತ್ತು ಸದಾ ಹೃದಯದಲ್ಲಿ ಇವರು ಏನೆಲ್ಲವನ್ನೂ ಹೇಳಿದರೋ

ನನ್ನ ಕಲ್ಯಾಣಕ್ಕಾಗಿಯೇ ಹೇಳಿದರು ಎಂಬ ಅನುಭವವಾಗುತ್ತದೆ. ಏಕೆಂದರೆ ಅವರ ಪ್ರತಿ ಹೃದಯದ ಶ್ರೇಷ್ಠ ಭಾವನೆಯಿರುತ್ತದೆ. ಹೇಗೆ ತಮ್ಮ ಹೃದಯದಲ್ಲಿ ಅವರಪ್ರತಿ ಶ್ರೇಷ್ಠ ಭಾವನೆ ಇರುವುದೋ ಅದೇರೀತಿ ತಮ್ಮ ಶುಭಭಾವನೆಯ ಪ್ರತಿಫಲವು ಅನ್ಯರ ಮುಖಾಂತರವೂ ಪ್ರಾಪ್ತಿಯಾಗುತ್ತದೆ. ಹೇಗೆ ಗುಮ್ಮಟದಲ್ಲಿ ಶಬ್ಧ ಮಾಡುತ್ತೀರೆಂದರೆ ಅದೇ ಶಬ್ಧವು ಪ್ರತಿಧ್ವನಿಸುತ್ತದೆ. ಅಂದಾಗ ಹೇಗೆ ತಂದೆಯ ಪ್ರತಿ ಅಟೂಟ, ಅಖಂಡ, ಅಟಲ ಪ್ರೀತಿಯಿದೆಯೋ, ಶ್ರೇಷ್ಠ ಭಾವನೆಯಿದೆಯೋ, ಹಾಗೆಯೇ ಬ್ರಾಹ್ಮಣ ಆತ್ಮರು ನಂಬರ್ವಾರ್ ಇದ್ದರೂ ಸಹ ಆತ್ಮಿಕ ಅಟೂಟ, ಅಖಂಡವಾಗಿದೆಯೇ? ವಿಭಿನ್ನ ಚಲನೆ, ವಿಭಿನ್ನ ಸಂಸ್ಕಾರವನ್ನು ನೋಡಿ ಪ್ರೀತಿ ಮಾಡುತ್ತೀರೆಂದರೆ ಅದು ಅಟೂಟ ಮತ್ತು ಅಖಂಡವಾಗಿರುವುದಿಲ್ಲ. ತನ್ನ ಪ್ರತಿ ಹಾಗೂ ಅನ್ಯರ ಪ್ರತಿ ಯಾವುದೇ ಆತ್ಮನ ಚಲನೆ ಅರ್ಥಾತ್ ಚರಿತ್ರೆ ಹಾಗೂ ಸಂಸ್ಕಾರವು ಮನಸ್ಸಿಗೆ ಇಷ್ಟವಾಗಲಿಲ್ಲವೆಂದರೆ ಪ್ರೀತಿಯ ಪರ್ಸಂಟೇಜ್ ಕಡಿಮೆಯಾಗಿ ಬಿಡುತ್ತದೆ. ಆದರೆ ಆತ್ಮದ ಶ್ರೇಷ್ಠಾತ್ಮದ ಭಾವದಿಂದ ಆತ್ಮಿಕ ಪ್ರೀತಿ, ಅದರಲ್ಲಿ ಪರ್ಸಂಟೇಜ್ ಇರುವುದಿಲ್ಲ. ಎಂತಹದ್ದೇ ಸಂಸ್ಕಾರವಿರಲಿ, ಚಲನೆಯಿರಲಿ ಆದರೆ ಬ್ರಾಹ್ಮಣ ಆತ್ಮರದು ಇಡೀ ಕಲ್ಪದಲ್ಲಿ ಅಟೂಟ ಸಂಬಂಧವಾಗಿದೆ, ಈಶ್ವರೀಯ ಪರಿವಾರವಾಗಿದೆ. ತಂದೆಯು ಪ್ರತಿಯೊಂದು ಆತ್ಮನನ್ನು ವಿಶೇಷವಾಗಿ ಆಯ್ಕೆ ಮಾಡಿ ಈಶ್ವರೀಯ ಪರಿವಾರದಲ್ಲಿ ತಂದಿದ್ದಾರೆ. ಅವರು ತಮಗೆ ತಾವೇ ಬಂದಿಲ್ಲ, ತಂದೆಯು ಕರೆ ತಂದಿದ್ದಾರೆ ಅಂದಮೇಲೆ ತಂದೆಯನ್ನು ಮುಂದಿಟ್ಟುಕೊಳ್ಳುವುದರಿಂದ ಪ್ರತಿಯೊಬ್ಬ ಆತ್ಮನೊಂದಿಗೂ ಆತ್ಮಿಕ, ಅಟೂಟ ಪ್ರೀತಿಯುಂಟಾಗುತ್ತದೆ. ಯಾವುದೇ ಆತ್ಮನ ಯಾವುದೇ ಮಾತು ತಮಗೆ ಇಷ್ಟವಾಗಲಿಲ್ಲವೆಂದರೆ ಆಗಲೇ ಪ್ರೀತಿಯಲ್ಲಿ ಅಂತರವು ಬರುತ್ತದೆ. ಆ ಸಮಯದಲ್ಲಿ ಇದನ್ನೇ ಬುದ್ಧಿಯಲ್ಲಿಟ್ಟುಕೊಳ್ಳಿ- ಈ ಆತ್ಮನನ್ನು ತಂದೆಯು ಇಷ್ಟ ಪಟ್ಟಿದ್ದಾರೆ, ಅವಶ್ಯವಾಗಿ ಇವರಲ್ಲಿ ಯಾವುದೋ ವಿಶೇಷತೆಯಿದೆ ಆದ್ದರಿಂದಲೇ ತಂದೆಯು ಇಷ್ಟ ಪಟ್ಟಿದ್ದಾರೆ. ಆದಿಯಿಂದ ಬಾಪ್ದಾದಾ ಮಕ್ಕಳಿಗೆ ಇದನ್ನು ತಿಳಿಸುತ್ತಲೇ ಇದ್ದಾರೆ – ತಿಳಿದುಕೊಳ್ಳಿ - ಯಾರಲ್ಲಿಯಾದರೂ 36 ಗುಣಗಳಲ್ಲಿ 35 ಗುಣಗಳು ಇಲ್ಲದೇ ಇರಬಹುದು, ಆದರೆ ಉಳಿದ ಒಂದು ಗುಣವಾದರೂ ವಿಶೇಷವಾಗಿದೆ ಆದ್ದರಿಂದಲೇ ತಂದೆಯು ಅವರನ್ನು ಮೆಚ್ಚಿದ್ದಾರೆ. ತಂದೆಯು ಅವರ 35 ಗುಣಗಳನ್ನು ನೋಡಿದರೋ ಅಥವಾ ಒಂದೇ ಗುಣವನ್ನು ನೋಡಿದರೋ? ಏನು ನೋಡಿದರು? ಎಲ್ಲದಕ್ಕಿಂತ ಅತಿ ದೊಡ್ಡ ಗುಣ ಹಾಗೂ ವಿಶೇಷತೆಯೇನೆಂದರೆ ತಂದೆಯನ್ನು ಗುರುತಿಸುವ ಬುದ್ಧಿ, ತಂದೆಯ ಮಕ್ಕಳಾಗುವ ಸಾಹಸ, ತಂದೆಯೊಂದಿಗೆ ಪ್ರೀತಿ ಮಾಡುವ ವಿಧಿಯಾಗಿದೆ. ಯಾವುದು ಇಡೀ ಕಲ್ಪದಲ್ಲಿ ಧರ್ಮಪಿತರಲ್ಲಿಯೂ ಇರಲಿಲ್ಲ, ರಾಜನೇತರಲ್ಲಿಯೂ ಇರಲಿಲ್ಲ, ಧನವಂತರಲ್ಲಿಯೂ ಇರಲಿಲ್ಲ ಆದರೆ ಅದು ಆ ಆತ್ಮನಲ್ಲಿದೆ. ತಂದೆಯು ತಮ್ಮೆಲ್ಲರೊಂದಿಗೆ ಕೇಳುತ್ತೇವೆ - ತಾವು ಯಾವಾಗ ತಂದೆಯ ಬಳಿ ಬಂದಿರೋ ಆಗ ಗುಣಸಂಪನ್ನರಾಗಿಯೇ ಬಂದಿದ್ದೀರಾ? ತಂದೆಯು ತಮ್ಮ ನಿರ್ಬಲತೆಗಳನ್ನು ನೋಡಿದರೇ? ತಾವೇ ನನ್ನವರಾಗಿದ್ದಿರಿ, ಆಗಿದ್ದೀರಿ, ಸದಾ ಆಗಿರುತ್ತೀರಿ ಎಂದು ಇನ್ನೂ ಸಾಹಸವನ್ನು ಹೆಚ್ಚಿಸಿದರಲ್ಲವೆ! ಅಂದಮೇಲೆ ಫಾಲೋಫಾದರ್ ಮಾಡಬೇಕಲ್ಲವೆ! ಯಾವಾಗ ವಿಶೇಷ ಆತ್ಮನೆಂದು ತಿಳಿದು ಯಾರನ್ನೇ ನೋಡುತ್ತೀರಿ, ಸಂಬಂಧ-ಸಂಪರ್ಕದಲ್ಲಿ ಬರುತ್ತೀರೆಂದರೆ ತಂದೆಯನ್ನು ಸನ್ಮುಖದಲ್ಲಿ ಇಟ್ಟುಕೊಳ್ಳುವುದರಿಂದ ಆತ್ಮದಲ್ಲಿ ಸ್ವತಹವಾಗಿ ಆತ್ಮಿಕ ಪ್ರೀತಿಯು ಇಮರ್ಜ್ ಆಗಿ ಬಿಡುತ್ತದೆ. ತಮ್ಮ ಸ್ನೇಹದಿಂದ ಸರ್ವರೂ ಸ್ನೇಹಿಯಾಗಿ ಬಿಡುತ್ತಾರೆ ಮತ್ತು ಆತ್ಮಿಕ ಸ್ನೇಹದಿಂದ ಸದಾ ಎಲ್ಲರ ಮೂಲಕ ಸದ್ಭಾವನೆ, ಸಹಯೋಗದ ಭಾವನೆಯು ಸ್ವತಹವಾಗಿ ತಮ್ಮ ಪ್ರತಿ ಆಶೀರ್ವಾದಗಳ ರೂಪದಲ್ಲಿ ಪ್ರಾಪ್ತಿಯಾಗುವುದು. ಇದಕ್ಕೇ ಆತ್ಮಿಕ ಯಥಾರ್ಥ ಶ್ರೇಷ್ಠ ಹ್ಯಾಂಡ್ಲಿಂಗ್ ಎಂದು ಹೇಳಲಾಗುತ್ತದೆ.

ಬಾಪ್ದಾದಾ ಇಂದು ಮುಗುಳ್ನಗುತ್ತಿದ್ದರು. ಮಕ್ಕಳಲ್ಲಿ ಮೂರು ಶಬ್ಧಗಳ ಕಾರಣ ಕಂಟ್ರೋಲಿಂಗ್ ಫವರ್, ರೂಲಿಂಗ್ ಫವರ್ ಕಡಿಮೆಯಾಗಿ ಬಿಡುತ್ತದೆ. ಆ ಮೂರು ಶಬ್ಧಗಳಾಗಿವೆ – 1. ವೈ (ಏಕೆ) 2. ವ್ಹಾಟ್ (ಏನು) 3. ವಾಂಟ್ (ಬೇಕು) ಈ ಮೂರೂ ಶಬ್ಧಗಳನ್ನು ಸಮಾಪ್ತಿ ಮಾಡಿ ಒಂದು ಶಬ್ಧವನ್ನು ಹೇಳಿರಿ. ವೈ ಬಂದರೂ ಸಹ ಒಂದು ಶಬ್ಧವನ್ನು ಹೇಳಿರಿ - ವಾಹ್! ವ್ಹಾಟ್ ಶಬ್ಧ ಬಂದರೂ ಸಹ ವಾಹ್! ಎಂದು ಹೇಳಿರಿ. ``ವಾಹ್-ವಾಹ್'' ಎಂದು ಹೇಳುವುದು ಬರುತ್ತದೆಯಲ್ಲವೆ. ವಾಹ್ ಬಾಬಾ! ವಾಹ್ ನಾನು! ಮತ್ತು ವಾಹ್ ಡ್ರಾಮಾ! ಕೇವಲ ``ವಾಹ್'' ಎನ್ನಿರಿ ಆಗ ಈ ಮೂರೂ ಶಬ್ಧಗಳು ಸಮಾಪ್ತಿಯಾಗುತ್ತವೆ. ಮೊದಲೂ ತಿಳಿಸಿದ್ದೆವಲ್ಲವೆ - ಬಾಪ್ದಾದಾ ಯಾವ ಆಟವನ್ನು ನೋಡಿದೆವು ಎಂದು. ತಮ್ಮೆಲ್ಲರ ಹಿಂದೆ ಮಾಡಿಸಿರುವ ಒಂದು ಚಿತ್ರವಿದೆ ಅದರಲ್ಲಿ ತೋರಿಸಿದ್ದಾರೆ - ಯೋಗಿಯು ಯೋಗ ಮಾಡುತ್ತಿದ್ದಾನೆ, ಬುದ್ಧಿಯನ್ನು ಏಕಾಗ್ರಚಿತ್ತ ಮಾಡುತ್ತಿದ್ದಾನೆ. ಬ್ಯಾಲೆನ್ಸ್ ಇಡುತ್ತಿದ್ದಾನೆ, ಬ್ಯಾಲೆನ್ಸ್ನ ತಕ್ಕಡಿಯನ್ನು ತೋರಿಸಿದ್ದಾರೆ. ಎಷ್ಟು ಬುದ್ಧಿಯ ಬ್ಯಾಲೆನ್ಸ್ ಮಾಡುವರೋ ಅಷ್ಟೇ ಯಾವುದೋ ಕೋತಿಯು ಬಂದು ಅದರಲ್ಲಿ ಕುಳಿತು ಬಿಡುತ್ತದೆ. ಈ ಮೂರೂ ಮಾತುಗಳ ಕೋತಿಯು ಬಂದು ಬಿಡುತ್ತದೆ ಎಂದರೆ ಆಗ ಬ್ಯಾಲೆನ್ಸ್ ಏನಾಗುವುದು? ಬ್ಯಾಲೆನ್ಸ್ ಇರುವುದಿಲ್ಲ, ಏರುಪೇರಾಗಿ ಬಿಡುತ್ತದೆ ಆಗ ಈ ಮೂರೂ ಶಬ್ಧಗಳು ಬ್ಯಾಲೆನ್ಸನ್ನು ಸಮಾಪ್ತಿ ಮಾಡಿ ಬಿಡುತ್ತವೆ ಮತ್ತು ಬುದ್ಧಿಯನ್ನು ನರ್ತನ ಮಾಡಿಸತೊಡಗುತ್ತವೆ. ಕೋತಿಯು ಆರಾಮದಿಂದ ಕುಳಿತುಕೊಳ್ಳುತ್ತದೆಯೇ? ಮತ್ತೇನೂ ಮಾಡಲಿಲ್ಲವೆಂದರೂ ಬಾಲವನ್ನಾದರೂ ಅಲುಗಾಡಿಸುತ್ತಿರುತ್ತದೆ ಹಾಗೆಯೇ ಇದರಲ್ಲಿಯೂ ಬ್ಯಾಲೆನ್ಸ್ ಆಗದಿರುವ ಕಾರಣ ತಂದೆಯ ಮೂಲಕ ಪ್ರತೀ ಹೆಜ್ಜೆಯಲ್ಲಿ ಯಾವ ಆಶೀರ್ವಾದಗಳು ದೊರೆಯುತ್ತವೆಯೋ ಹಾಗೂ ಆತ್ಮಿಕ ಸ್ನೇಹದ ಕಾರಣ ಪರಿವಾರದ ಮೂಲಕ ಯಾವ ಆಶೀರ್ವಾದಗಳು ಸಿಗುತ್ತವೆಯೋ ಅದರಿಂದ ವಂಚಿತರಾಗಿ ಬಿಡುತ್ತೀರಿ. ಹೇಗೆ ತಂದೆಯೊಂದಿಗೆ ಸಂಬಂಧವನ್ನು ಇಟ್ಟುಕೊಳ್ಳುವುದು ಅವಶ್ಯಕವಾಗಿದೆಯೋ ಹಾಗೆಯೇ ಈಶ್ವರೀಯ ಪರಿವಾರದೊಂದಿಗೆ ಸಂಬಂಧವನ್ನು ಇಟ್ಟುಕೊಳ್ಳುವುದೂ ಅವಶ್ಯಕವಾಗಿದೆ. ಇಡೀ ಕಲ್ಪದಲ್ಲಿ ನಂಬರ್ವನ್ ಆತ್ಮ ಬ್ರಹ್ಮಾ ತಂದೆ ಮತ್ತು ಈಶ್ವರೀಯ ಪರಿವಾರದ ಸಂಬಂಧ-ಸಂಪರ್ಕದಲ್ಲಿ ಬರಬೇಕಾಗಿದೆ ಆದ್ದರಿಂದ ತಂದೆಯಂತೂ ನಮ್ಮವರಾಗಿದ್ದಾರೆ. ನಾವು ತಂದೆಯವರಾಗಿದ್ದೇವೆ ಮತ್ತ್ಯಾರೂ ಬೇಕಿಲ್ಲವೆಂದು

ತಿಳಿದುಕೊಳ್ಳಬಾರದು. ಇದೂ ಸಹ ಪಾಸ್-ವಿತ್-ಆನರ್ ಆಗುವ ಲಕ್ಷಣವಲ್ಲ ಏಕೆಂದರೆ ತಾವೇನೂ ಸನ್ಯಾಸಿ ಆತ್ಮರಲ್ಲ. ಋಷಿ-ಮುನಿ ಆತ್ಮರಲ್ಲ, ವಿಶ್ವದಿಂದ ದೂರ ಸರಿಯುವವರಲ್ಲ ಆದರೆ ವಿಶ್ವಕ್ಕೆ ಆಸರೆಯಾಗುವಂತಹ ಆತ್ಮರಾಗಿದ್ದೀರಿ. ವಿಶ್ವದಿಂದ ದೂರ ಸರಿಯುವವರಲ್ಲ, ವಿಶ್ವ ಕಲ್ಯಾಣಕಾರಿಗಳಾಗಿದ್ದೀರಿ. ಬ್ರಾಹ್ಮಣ ಆತ್ಮರ ಮಾತಂತೂ ಬಿಟ್ಟು ಬಿಡಿ ಆದರೆ ಪ್ರಕೃತಿಯನ್ನೂ ಪರಿವರ್ತನೆ ಮಾಡಲು ಆಸರೆ ತಾವಾಗಿದ್ದೀರಿ. ಪರಿವಾರದ ಅವಿನಾಶಿ ಪ್ರೀತಿಯ ದಾರದ ಮಧ್ಯದಿಂದ ನೀವು ಬೇರೆಯಾಗಲು ಸಾಧ್ಯವಿಲ್ಲ. ವಿಜಯಿ ರತ್ನಗಳು ಪ್ರೀತಿಯ ದಾರದ ಮಧ್ಯದಿಂದ ಬಿಡಿಸಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಎಂದೂ ಯಾವುದೇ ಮಾತಿನಲ್ಲಿ, ಯಾವುದೇ ಸ್ಥಾನದಲ್ಲಿ, ಯಾವುದೇ ಸೇವೆಯಿಂದ, ಜೊತೆಗಾರರಿಂದ ದೂರ ಸರಿದು ತಮ್ಮ ಸ್ಥಿತಿಯನ್ನು ಚೆನ್ನಾಗಿ ಮಾಡಿಕೊಂಡು ತೋರಿಸುತ್ತೇನೆ ಎಂಬ ಸಂಕಲ್ಪ ಮಾಡಬೇಡಿರಿ. ನಾವು ಇವರ ಜೊತೆ ನಡೆಯಲು ಆಗುವುದಿಲ್ಲ, ಅವರ ಜೊತೆಯಾದರೆ ನಡೆಯುತ್ತೇವೆ, ಈ ಸ್ಥಾನದಲ್ಲಿ ಉನ್ನತಿಯಾಗುವುದಿಲ್ಲ, ಇನ್ನೊಂದು ಸ್ಥಾನದಲ್ಲಿ ಆಗುತ್ತದೆ, ಈ ಸೇವೆಯಲ್ಲಿ ವಿಘ್ನವಿದೆ ಇನ್ನೊಂದು ಸೇವೆಯಲ್ಲಿ ಚೆನ್ನಾಗಿರುವುದು ಎಂದು ಹೇಳುತ್ತಾರಲ್ಲವೆ. ಇವೆಲ್ಲವೂ ದೂರ ಸರಿಯುವ ಮಾತುಗಳಾಗಿವೆ. ಒಂದುವೇಳೆ ಒಂದು ಬಾರಿ ತಮ್ಮಲ್ಲಿ ಈ ಹವ್ಯಾಸ ಮಾಡಿಕೊಂಡರೆ ಈ ಹವ್ಯಾಸವು ತಮ್ಮನ್ನು ಎಲ್ಲಿಯೂ ನಿಲ್ಲಲು ಬಿಡುವುದಿಲ್ಲ. ಬುದ್ಧಿಯು ಏಕಾಗ್ರವಾಗಿರಲು ಬಿಡುವುದಿಲ್ಲ ಏಕೆಂದರೆ ಬುದ್ಧಿಗೆ ಬದಲಾಯಿಸುವ ಹವ್ಯಾಸವಾಗಿ ಬಿಟ್ಟಿದೆ. ಇದೂ ಸಹ ನಿರ್ಬಲತೆಯೆಂದೇ ಎಣಿಸಲಾಗುವುದು. ಉನ್ನತಿಯ ಲೆಕ್ಕದಲ್ಲಿ ಬರುವುದಿಲ್ಲ. ಸದಾ ತಮ್ಮಲ್ಲಿ ಶುಭಭರವಸೆಯನ್ನು ಇಟ್ಟುಕೊಳ್ಳಿ, ನಿರಾಶಾವಾದಿಗಳಾಗಬೇಡಿ. ಹೇಗೆ ತಂದೆಯು ಪ್ರತೀ ಮಗುವಿನಲ್ಲಿ ಶುಭ ಭರವಸೆಯನ್ನಿಟ್ಟರು, ಹೇಗೇ ಇರಬಹುದು ತಂದೆಯು ಕೊನೆಯ ನಂಬರಿನವರೊಂದಿಗೂ ಸಹ ಎಂದು ಬೇಸರ ಪಡಲಿಲ್ಲ. ಸದಾ ಅವರಲ್ಲಿಯೂ ಭರವಸೆಯನ್ನಿಟ್ಟರು ಅಂದಮೇಲೆ ತಾವೂ ಸಹ ತಮ್ಮೊಂದಿಗಾಗಲಿ, ಅನ್ಯರೊಂದಿಗಾಗಲಿ ಸೇವೆಯಲ್ಲಾಗಲಿ ಭರವಸೆ ಕಳೆದುಕೊಂಡು ಹೃದಯವಿಧೀರ್ಣರಾಗಬೇಡಿ, ಹೃದಯರಾಜರಾಗಿ. ರಾಜ ಎಂದರೆ ವಿಶಾಲಹೃದಯಿ, ಸದಾ ದೊಡ್ಡ ಹೃದಯಿ. ಯಾವುದೇ ನಿರ್ಬಲ ಸಂಸ್ಕಾರವನ್ನು ಧಾರಣೆ ಮಾಡಿಕೊಳ್ಳಬೇಡಿ. ಮಾಯೆಯು ಭಿನ್ನ-ಭಿನ್ನ ರೂಪದಿಂದ ನಿರ್ಬಲರನ್ನಾಗಿ ಮಾಡುವ ಪ್ರಯಾಸ ಮಾಡುತ್ತದೆ ಆದರೆ ತಾವು ಮಾಯೆಗೂ ಜ್ಞಾನಪೂರ್ಣರಾಗಿದ್ದೀರಲ್ಲವೆ ಅಥವಾ ಅರ್ಧಂಬರ್ಧ ಜ್ಞಾನವಿದೆಯೋ? ಇದನ್ನೂ ನೆನಪಿಟ್ಟುಕೊಳ್ಳಿ - ಮಾಯೆಯು ಹಳೆಯ ರೂಪದಲ್ಲಿ ಬರುವುದಿಲ್ಲ, ಹೊಸ-ಹೊಸ ರೂಪದಲ್ಲಿ ಬರುತ್ತದೆ. ಏಕೆಂದರೆ ಹಳೆಯ ರೂಪದಲ್ಲಿ ಬಂದರೆ ಇವರು ಗುರುತಿಸುತ್ತಾರೆಂದು ಅದಕ್ಕೂ ಗೊತ್ತಿದೆ. ಮಾತು ಅದೇ ಆಗಿರುತ್ತದೆ ಆದರೆ ಹೊಸ ರೂಪವನ್ನು ಧಾರಣೆ ಮಾಡಿಕೊಂಡು ಬರುತ್ತದೆ. ತಿಳಿಯಿತೆ! ಒಳ್ಳೆಯದು.

ಟೀಚರ್ಸ್ ಮಾಯೆಯ ಬಗ್ಗೆ ಜ್ಞಾನಪೂರ್ಣರಾಗಿದ್ದೀರಾ? ಕೇವಲ ಜ್ಞಾನವೇ ಅಲ್ಲ ಆದರೆ ಜ್ಞಾನಪೂರ್ಣರಾಗಿದ್ದೀರಾ? ತಂದೆಯನ್ನು ಗುರುತಿಸಿದ್ದೇವೆ ಎಂದಷ್ಟೇ ಯೋಚಿಸಬಾರದು, ಮಾಯೆಯನ್ನೂ ಗುರುತಿಸಬೇಕಾಗಿದೆ. ಈಗ ಬಂಧನದಲ್ಲಿ ಬಂಧಿತರಾಗಿದ್ದೀರಾ ಅಥವಾ ಕಠಿಣವೆನಿಸುತ್ತಿದೆಯೇ? ಮಧುರ ಬಂಧನವೆನಿಸುತ್ತದೆಯೇ ಅಥವಾ ಸ್ವಲ್ಪ ಕಷ್ಟದ ಬಂಧನವೆನಿಸುತ್ತಿದೆಯೇ? ಇಲ್ಲಂತು ಬಹಳ ಸಹನೆ ಮಾಡಬೇಕಾಗುತ್ತದೆ ಎಂದು ಯೋಚಿಸುತ್ತೀರಾ! ತಂದೆಯ ಮಗುವಾಗಿ ಬಿಟ್ಟೆವು, ಈಗ ಮತ್ತೆ ಇದನ್ನು ಮಾಡಬೇಕು, ಇದನ್ನು ಮಾಡಬೇಕು, ಎಲ್ಲಿಯವರೆಗೆ ಮಾಡುವುದು! ಒಂದುವೇಳೆ ಇದೇನಾದರೂ ಗೊತ್ತಾಗಿದ್ದರೆ ಬರುತ್ತಲೇ ಇರಲಿಲ್ಲ ಎಂಬ ವಿಚಾರ ನಡೆಯುತ್ತದೆಯೇ? ಎಲ್ಲಿ ಪ್ರೀತಿಯಿರುವುದೋ ಅಲ್ಲಿ ಯಾವುದೇ ಕಷ್ಟವಿಲ್ಲ. ಪತಂಗವೂ ಸಹ ಜ್ಯೋತಿಯ ಮೇಲೆ ಅರ್ಪಣೆ ಆಗಿ ಬಿಡುತ್ತದೆ. ಅಂದಮೇಲೆ ತಾವು ಶ್ರೇಷ್ಠಾತ್ಮರು ಪರಮಾತ್ಮ ಪ್ರೀತಿಯಲ್ಲಿ ಕಷ್ಟದ ಅನುಭವ ಮಾಡಲು ಸಾಧ್ಯವೇ? ಯಾವಾಗ ಪತಂಗವೇ ಅರ್ಪಣೆಯಾಗುತ್ತದೆ ಅಂದಮೇಲೆ ತಾವೇಕೆ ಮಾಡಲು ಸಾಧ್ಯವಿಲ್ಲ? ಯಾವ ಗಳಿಗೆಯಲ್ಲಿ ಕಷ್ಟದ ಅನುಭವವಾಗುವುದೋ ಆಗ ಅವಶ್ಯವಾಗಿ ಪ್ರೀತಿಯ ಶೇಕಡಾವಾರು ಆಗಿಬಿಡುತ್ತದೆ ಆದ್ದರಿಂದ ಸ್ವಲ್ಪ ಸಮಯ ಕಷ್ಟವೆನಿಸುತ್ತದೆ. ಒಂದುವೇಳೆ ಕಷ್ಟವಾಗುತ್ತದೆಯೆಂದರೆ ಸದಾ ಕಷ್ಟವೆನಿಸಬೇಕು ಆದರೆ ಕೆಲವೊಮ್ಮೆಗಷ್ಟೇ ಕಷ್ಟವೆನಿಸುತ್ತದೆ? ಪರಮಾತ್ಮ ಹಾಗೂ ತಮ್ಮ ಮಧ್ಯೆ ಕೆಲವು ಮಾತುಗಳು ಬರುತ್ತವೆ ಆದ್ದರಿಂದ ಕಷ್ಟವಾಗಿಬಿಡುತ್ತದೆ ಮತ್ತು ಪರ್ಸೆಂಟೇಜಿನಲ್ಲಿ ಅಂತರವಾಗಿ ಬಿಡುತ್ತದೆ. ಅದನ್ನು ಮಧ್ಯದಿಂದ ತೆಗೆದುಬಿಡುತ್ತೀರೆಂದರೆ ಸಹಜವಾಗಿಬಿಡುವುದು.

ಬಾಪ್ದಾದಾರವರು ಸದಾ ಹೇಳುತ್ತಾರೆ - ಟೀಚರ್ಸ್ ಅರ್ಥಾತ್ ಸದಾ ತಮ್ಮನ್ನು ಸಾಹಸದಲ್ಲಿ ಇಡುವವರು ಮತ್ತು ಅನ್ಯರಿಗೆ ಸಾಹಸ ಕೊಡಲು ನಿಮಿತ್ತರಾಗಿರುವವರು. ಇಲ್ಲದಿದ್ದರೆ ಟೀಚರ್ ಏಕಾಗಿದ್ದೀರಿ? ಟೀಚರ್ ಎಂದರೆ ವಿದ್ಯಾರ್ಥಿಗಳಿಗಾಗಿ ನಿಮಿತ್ತ. ಬಲಹೀನರಿಗೆ ಸಾಹಸವನ್ನು ಕೊಟ್ಟು ಮುಂದುವರೆಸುವ ಸೇವೆಗೆ ನಿಮಿತ್ತರಾಗಿದ್ದೀರಿ. ಸಫಲ ಟೀಚರ್‌ನ ಮೊದಲ ಚಿಹ್ನೆಯು ಇದೇ ಆಗಿರುತ್ತದೆ - ಅವರೆಂದಿಗೂ ಸಾಹಸಹೀನರಾಗುವುದಿಲ್ಲ. ಯಾರು ಸ್ವಯಂ ಸಾಹಸವಂತರು ಆಗಿರುತ್ತಾರೆಯೋ ಅವರು ಅನ್ಯರಿಗೂ ಅವಶ್ಯವಾಗಿ ಸಾಹಸವನ್ನು ಕೊಡುತ್ತಾರೆ. ಸ್ವಯಂನಲ್ಲಿಯೇ ಸಾಹಸವು ಕಡಿಮೆಯಾಗುತ್ತದೆ ಎಂದರೆ ಅನ್ಯರಿಗೂ ಸಹ ಕೊಡಲು ಸಾಧ್ಯವಿಲ್ಲ. ಒಳ್ಳೆಯದು!

ನಾಲ್ಕಾರು ಕಡೆಯ ಸಾಹಸ ಮಕ್ಕಳದು ಸಹಯೋಗ ತಂದೆಯದು - ಈ ಅಧಿಕಾರವನ್ನು ಅನುಭವ ಮಾಡುವವರು, ಸದಾ ಸ್ವರಾಜ್ಯದ ಶಕ್ತಿಗಳನ್ನು ಪ್ರತೀ ಸಮಯ ಪ್ರಮಾಣ ಪ್ರಯೋಗದಲ್ಲಿ ತರುವವರು, ಸದಾ ತಂದೆ ಮತ್ತು ಸರ್ವ ಆತ್ಮರ ಅಟೂಟ ಸ್ನೇಹಿಗಳು, ಸದಾ ಪ್ರತೀ ಕಾರ್ಯದಲ್ಲಿ, ಸಂಬಂಧ-ಸಂಪರ್ಕದಲ್ಲಿ "ವಾಹ್-ವಾಹ್"ನ ಗೀತೆಯನ್ನು ಹಾಡುವಂತಹ ಸರ್ವಶಕ್ತಿವಂತ

ಮಕ್ಕಳಿಗೆ ಬಾಪ್ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.

ವರದಾನ: ವರದಾನ: ಪ್ಲೇನ್ ಬುದ್ಧಿಯವರಾಗಿ ಸೇವೆಯ ಯೋಜನೆಯನ್ನು ತಯಾರು ಮಾಡುವಂತಹ ಯಥಾರ್ಥ ಸೇವಾಧಾರಿ ಭವ.

ಯಥಾರ್ಥ ಸೇವಾಧಾರಿಯೆಂದರೆ - ಯಾರು ಸ್ವಯಂನ ಹಾಗೂ ಸರ್ವರ ಸೇವೆಯನ್ನು ಒಟ್ಟೊಟ್ಟಿಗೆ ಮಾಡುತ್ತಾರೆ. ಸ್ವಯಂನ ಸೇವೆಯಲ್ಲಿ ಸರ್ವರ ಸೇವೆಯು ಅಡಗಿಕೊಂಡಿದೆ. ಅನ್ಯರ ಸೇವೆ ಮಾಡಿರಿ ಮತ್ತು ತಮ್ಮ ಸೇವೆಯಲ್ಲಿ ಆಲಸ್ಯದವರಾಗಿ ಎಂದಲ್ಲ. ಸೇವೆಯಲ್ಲಿ ಸೇವೆ ಹಾಗೂ ಯೋಗವೆರಡೂ ಒಟ್ಟೊಟ್ಟಿಗೆ ಇರಲಿ. ಇದಕ್ಕಾಗಿ ಪ್ಲೇನ್ ಬುದ್ಧಿಯವರಾಗಿದ್ದು ಸೇವೆಯ ಪ್ಲಾನ್ ಮಾಡಿರಿ. ಪ್ಲೇನ್ ಬುದ್ಧಿಯೆಂದರೆ ನಿಮಿತ್ತ ಹಾಗೂ ನಿರ್ಮಾಣ ಭಾವದ ವಿನಃ ಮತ್ತ್ಯಾವುದೇ ಮಾತು ಬುದ್ಧಿಯನ್ನು ಟಚ್ ಸಹ ಮಾಡಬಾರದು. ಅಲ್ಪಕಾಲದ ಹೆಸರು, ಅಲ್ಪಕಾಲದ ಮಾನ್ಯತೆಯಲ್ಲ ಆದರೆ ನಿರಹಂಕಾರಿ ಆಗಿರುವುದೇ ಶುಭ-ಭಾವನೆ ಹಾಗೂ ಶುಭ ಕಾಮನೆಯ ಬೀಜವಾಗಿದೆ.

ಸ್ಲೋಗನ್: ಸ್ಲೋಗನ್: ಜ್ಞಾನ ದಾನದ ಜೊತೆ-ಜೊತೆಗೆ ಗುಣ ದಾನವನ್ನು ಮಾಡುತ್ತೀರೆಂದರೆ ಸಫಲತೆಯು ಸಿಗುತ್ತಿರುತ್ತದೆ.